**ಓ.ಎಸ್. 328/2014 ಡಿ.ಡಬ್ಲೂ-2 ಹೆಸರು – ಶಿವಕುಮಾರ**

**ಸಾಕ್ಷಿಯನ್ನು ದಿನಾಂಕಃ 18.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ವಾದಿ ಪರ ಶ್ರೀ ಎಂ.ಎ.ಎಸ್. ವಕೀಲರಿಂದಃ**

ನನ್ನ ವಯಸ್ಸು ಅಂದಾಜು 37 ವರ್ಷ. 2 ನೇ ಪ್ರತಿವಾದಿ ನನ್ನ ಮಾವ. ದಿಃ 20.03.2000 ರಂದು ನನ್ನ ತಂದೆ ಜೀವಂತವಿರುವಾಗ ದಾವಾ ಸ್ವತ್ತನ್ನು ಮೈನರ್ ಗಾರ್ಡಿಯನ್ ಆಗಿ ಮೈನರ್ ಮಕ್ಕಳ ಪರವಾಗಿಯೂ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ 1 ರಲ್ಲಿ ನನ್ನ ವಯಸ್ಸು 14 ವರ್ಷ ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುವರು. ಅದರ ಪ್ರಕಾರ ನನ್ನ ವಯಸ್ಸು 39 ವರ್ಷ ಎಂದರೆ ಸಾಕ್ಷಿ ಇರಬಹುದು ಎನ್ನುವರು. ನನ್ನ ತಂದೆ 2 ನೇ ಪ್ರತಿವಾದಿಗೆ ಈ ಮೊದಲು ದಿಃ 03.06.1998 ರಂದು ದಾವಾ ಸ್ವತ್ತನ್ನು ಭೋಗ್ಯ ಮಾಡಿದ್ದರು ಎಂದರೆ ಸರಿ. ಸದರಿ ಭೋಗ್ಯದ ಸಾಲ ತೀರಿಸಲು ಹಾಗೂ ಮೈನರ್ ಮಕ್ಕಳ ಪಾಲನೆ ಪೋಷಣೆಗಾಗಿ ದಾವಾ ಸ್ವತ್ತನ್ನು ಕಾನೂನು ಬದ್ಧವಾಗಿ 2 ನೇ ಪ್ರತಿವಾದಿಗೆ ಅಂದಿನ ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಅಂದಿನಿಂದ 2 ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಭೋಗ್ಯ ಮಾಡಿದ್ದು ಅಂದಿನಿಂದ 2 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎನ್ನುವರು. ಪ್ರಸ್ತುತ ಜಮೀನಿನ ಬೆಲೆ ಜಾಸ್ತಿಯಾಗಿದ್ದು ಆದಕಾರಣ 2 ನೇ ಪ್ರತಿವಾದಿಯ ವಿರುದ್ಧ ವಾದಿಗಳೊಂದಿಗೆ ಸೇರಿಕೊಂಡು 1 ನೇ ಪ್ರತಿವಾದಿಯ ಕುಮ್ಮಕ್ಕಿನ ಮೇರೆಗೆ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡಿಸಿ 2 ನೇ ಪ್ರತಿವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. 2 ನೇ ಪ್ರತಿವಾದಿಯಿಂದ ನನಗೆ ಯಾವುದೇ ಭಾಗಾಂಶ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**